ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–

ಅ) ಬರಗಾಲದ ಹಿನ್ನೆಲೆಯಲ್ಲಿ, ಜಿಲ್ಲೆಯಲ್ಲಿ ಮೇವಿನ ಕೊರತೆ ಉಂಟಾಗದಂತೆ, ಮೇವು ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ. ಅಗತ್ಯವಿದ್ದಲ್ಲಿ, ಮೇವು ಖರೀದಿ ಮತ್ತು ಗೋಶಾಲೆಗಳನ್ನು ತೆರೆಯಲಾಗಿದೆ. ಕುಡಿಯುವ ನೀರಿನ ಪೂರೈಕೆ ಮತ್ತು ರೈತರಿಗೆ ಉದ್ಯೋಗ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ರೂ. 450.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಜಿಲ್ಲಾ ಆಸ್ಪತ್ರೆ ಪ್ರಾರಂಭಿಸುವುದು

543 (100) ಶ್ರೀ ನರೇಂದ್ರ ಆರ್. (ಹನೂರು):– ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಾಮರಾಜನಗರದಲ್ಲಿ ಜಿಲ್ಲಾ ಆಸ್ಪತ್ರೆ ಕಟ್ಟಡ ಕಾಮಗಾರಿ ಮುಗಿದಿದ್ದರೂ ಸಹ ಜಿಲ್ಲಾ ಆಸ್ಪತ್ರೆಯನ್ನು ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅದನ್ನು ಪ್ರಾರಂಭಿಸಿ ಜಿಲ್ಲೆಯ ಜನರಿಗೆ ಅನುಕೂಲ ಕಲ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–

ಅ) ಪ್ರಸ್ತುತ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯು 150 ಹಾಸಿಗೆಗಳ ಕಟ್ಟಡವನ್ನು ಹೊಂದಿದ್ದು ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ನೀಡುತ್ತಿದೆ.

ಹೆಚ್ಚುವರಿ 100 ಹಾಸಿಗೆಗಳ ಕಟ್ಟಡದ ನಿರ್ಮಾಣವು ಪೂರ್ಣಗೊಂಡಿದ್ದು ದಿನಾಂಕ : 21–11–2011 ರಂದು ಇಲಾಖೆಗೆ ಹಸ್ತಾಂತರಗೊಂಡಿದೆ.

ಆ) ಈ ನೂತನ ಕಟ್ಟಡದಲ್ಲಿ ಆರೋಗ್ಯ ಸೇವೆ ಪ್ರಾರಂಭಿಸುವ ಕ್ರಮ ಜಾರಿಯಲ್ಲಿ ಇದೆ.